ಕರ್ನಾಟಕ ಕವಿರತ್ನ ಹೊಸಕೆರೆ ಚಿದಂಬರಯ್ಯ

ವಿರಚಿತ

ಜಗದ್ಗುರು ಶಂಕರಾಚಾರ್ಯ ಸ್ತೋತ್ರಮಾಲೆ



ಸಂಪಾದಕರು: ಪ್ರೊ|| ಜಿ. ಅಶ್ವತ್ಥನಾರಾಯಣ

ಪ್ರಾಯೋಜಕರು: ಶ್ರೀಮತಿ ಮತ್ತು ಶ್ರೀ ಲಲಿತ ರಾಮಚಂದ್ರ

ಶ್ರೀ ಚಿದಂಬರ ಉಚಿತ ಧಾರ್ಮಿಕ ಗ್ರಂಥಾಲಯ, ತುರುವೇಕೆರೆ

ಕರ್ನಾಟಕ ಕವಿರತ್ನ ಹೊಸಕೆರೆ ಚಿದಂಬರಯ್ಯ

ವಿರಚಿತ

ಜಗದ್ಗುರು ಶಂಕರಾಚಾರ್ಯ ಸ್ತೋತ್ರ ಮಾಲೆ

ಸಂಪಾದಕರು:

ಪ್ರೊ॥ ಜಿ. ಅಶ್ವತ್ಥನಾರಾಯಣ

ಪ್ರಾಯೋಜಕರು:

ಶ್ರೀಮತಿ ಲಲಿತ ರಾಮಚಂದ್ರ

ಶ್ರೀ ಚಿದಂಬರ ಉಚಿತ ಧಾರ್ಮಿಕ ಗ್ರಂಥಾಲಯ

ಮಸೀದಿ ರಸ್ತೆ, ತುರುವೇಕೆರೆ, ತುಮಕೂರು ಜಿಲ್ಲೆ.

೨೦೦೯

ಸಂಪಾದಕರ ನುಡಿ

ಶ್ರೀ ದ. ಕೃ ಭಾರದ್ವಾಜರು ಹೇಳುವಂತೆ, "ಶುದ್ಧ ಸರಳ ಗಂಭೀರ ಗದ್ಯರಚನೆಯ ಹಳಬರಲ್ಲಿ ಒಬ್ಬರು ಚ.ವಾಸುದೇವಯ್ಯ, ಇನ್ನೊಬ್ಬರು ಹೊಸಕೆರೆ ಚಿದಂಬರಯ್ಯನವರು." ಸ್ವತಂತ್ರ ಗ್ರಂಥಗಳಿಗಿಂತ ಸಂಗ್ರಹ, ಅನುವಾದಗಳನ್ನು ಹೊಸಕೆರೆ ಚಿದಂಬರಯ್ಯನವರು ಸಾಕಷ್ಟು ಮಾಡಿದ್ದಾರೆ. ಹೊಸಗನ್ನಡದ ತಿಳಿನುಡಿಯಲ್ಲಿ ಧಾರ್ಮಿಕ ವಿಷಯ, ವೇದ, ಗೀತೋಪನಿಷತ್ತುಗಳನ್ನು ಕುರಿತು ಅವರಂತೆ ಬರೆದಿರುವವರು ಅಪರೂಪ. ಹೊಸಗನ್ನಡ ಗದ್ಯ ನಿರ್ಮಾಪಕರಲ್ಲಿ ಅವರೊಬ್ಬರು. ಅಷ್ಟೇ ಅಲ್ಲ, ಕನ್ನಡದ ನವೋದಯ ಕವಿಗಳಲ್ಲಿ ಒಬ್ಬರಾಗಿದ್ದಾರೆ. ಅವರು ರಚಿಸಿರುವ ಕೀರ್ತನೆಗಳು, ಕೀರ್ತನ ಕಂಠಾಭರಣವೆಂಬ ಕೃತಿಯಲ್ಲಿರುವ ನಲವತ್ತು ಹರಿಕಥೆಗಳು, ಹಿಂದೂಧರ್ಮದ ಕೈಪಿಡಿ ಎನಿಸುವ ಆರ್ಯಧರ್ಮ ಪ್ರದೀಪ, ಗೀತಾರ್ಥ ಚಂದ್ರಿಕೆ ಮುಂತಾದ ಗ್ರಂಥಗಳು ಕನ್ನಡಕ್ಕೆ ಶ್ರೇಷ್ಠ ಕೊಡುಗೆಗಳಾಗಿವೆ. ಅದ್ವೈತಿಗಳಾದ ಹೊಸಕೆರೆ ಚಿದಂಬರಯ್ಯನವರಿಗೆ ಶಂಕರ ಸಾಹಿತ್ಯದಲ್ಲಿ ವಿಶೇಷ ಆಸಕ್ತಿ ಮತ್ತು ಪರಿಣತಿ ಇತ್ತು. ಶಂಕರಾಚಾರ್ಯರನ್ನು ಕುರಿತು ಹಲವಾರು ಕೃತಿಗಳನ್ನು ರಚಿಸಿದ್ದಾರೆ. ಶಂಕರಾಚಾರ್ಯರ ಆಖ್ಯಾನ, ಶಂಕರ ಕಥಾಮೃತ, ಶಂಕರಾಚಾರ್ಯರ ಜೀವನಚರಿತ್ರೆ, ಶಂಕರಾಚಾರ್ಯರ ಸ್ತೋತ್ರಮಾಲೆ ಮುಂತಾದ ಕೃತಿಗಳನ್ನು ರಚಿಸಿದ್ದಾರೆ ಮತ್ತು ಶಂಕರಾಚಾರ್ಯರಿಂದ ರಚಿತವಾದ ಗ್ರಂಥಗಳ ಅನುವಾದವನ್ನು ಮಾಡಿದ್ದಾರೆ. ಕನ್ನಡದಲ್ಲಿ ಸಾಮಾನ್ಯರಿಗಾಗಿ ಶಂಕರ ಸಾಹಿತ್ಯವನ್ನು ರಚಿಸಿದವರಲ್ಲಿ ಚಿದಂಬರಯ್ಯ ಒಬ್ಬರು.

ಇವರು ರಚಿಸಿದ ಗ್ರಂಥಗಳಲ್ಲಿ ಪುಟ್ಟ ಪದ್ಯ ಗ್ರಂಥ ಶಂಕರಾಚಾರ್ಯರ ಸ್ತೋತ್ರ ಮಾಲೆ. ೧೯೩೭ರಲ್ಲಿ ರಚಿತವಾದ ಈ ಪುಸ್ತಕವನ್ನು ಎಂ. ರಾಮರಾವ್‌ರವರ ಎಸ್ ಎಸ್ ಎನ್ ಬುಕ್ ಡಿಪೋದ ಮೂಲಕ ಪ್ರಕಟಿಸಿದ್ದಾರೆ. ಇದು ೩೩ ಚೌಪದಿಗಳಲ್ಲಿ "ಭಜಗೋವಿಂದಂ" ಧಾಟಿಯಲ್ಲಿ ಶಂಕರರ ಜೀವನ ಸಾಧನೆಗಳನ್ನು ಮಕ್ಕಳು , ಹೆಂಗಸರು ಬಿಡುವಾದಾಗಲೆಲ್ಲ ಸಂಪ್ರದಾಯದ ಹಾಡುಗಳಂತೆ, ದಾಸರ ಪದಗಳಂತೆ ಹಾಡಿಕೊಳ್ಳಲು ರಚಿಸಿದ ಗ್ರಂಥ. ೩"X೪" ಅಳತೆಯ ಅಂಗೈ ಅಗಲದ ಹದಿನಾರು ಪುಟಗಳ ಗ್ರಂಥ. ಬೇಹಾಗ್ ರಾಗದಲ್ಲಿ ಆದಿತಾಳದಲ್ಲಿ ಇರುವ ಈ ಸ್ತೋತ್ರಮಾಲೆಯನ್ನು ಕಳೆದ ಶತಮಾನದಲ್ಲಿ ಸಾವಿರಾರು ಮಹಿಳೆಯರು ಮನೆಗಳಲ್ಲಿ ಮನೆಗೆಲಸದ ನಡುವೆ, ಪೂಜಾವೇಳೆಯಲ್ಲಿ ಹಾಡಿಕೊಳ್ಳುತ್ತಿದ್ದರು. ಭಜನೆ ಮಂದಿರಗಳಲ್ಲಿ ತಪ್ಪದೆ ಹಾಡುತ್ತಿದ್ದ ಹಾಡುಗಳಲ್ಲಿ ಒಂದಾಗಿತ್ತು. ಹೀಗಾಗಿ ಈ ಹಾಡಿಗೆ ಹಲವಾರು ಪ್ರಕ್ಷಿಪ್ತ ಪದ್ಯಗಳು ಸೇರಿವೆ. ಹತ್ತಾರು ಪಾಠಾಂತರಗಳಿವೆ. ಇಲ್ಲಿ ಅವುಗಳನ್ನೆಲ್ಲ ಚರ್ಚಿಸದೆ ಹೊಸಕೆರೆ ಚಿದಂಬರಯ್ಯನವರು ರಚಿಸಿ ೧೯೩೭ರಲ್ಲಿ ಪ್ರಕಟಿಸಿದ ಮೂಲ ಮುವ್ವತ್ಮೂರು ಪದ್ಯಗಳನ್ನು ಮಾತ್ರ ಅಚ್ಚಿನ ದೋಷಗಳನ್ನು ತಿದ್ದಿ ಶ್ರೀ ಶಂಕರಜಯಂತಿ ಪ್ರಯುಕ್ತ ಪ್ರಕಟಿಸಲಾಗಿದೆ. ಭಕ್ತಾದಿಗಳು ಇದರ ಪ್ರಯೋಜನ ಪಡೆಯುವರೆಂದು ಆಶಿಸಲಾಗಿದೆ.

೨೭.೦೪.೨೦೦೯ ಪ್ರೊ|| ಜಿ. ಅಶ್ವತ್ಥನಾರಾಯಣ

ಜಗದ್ಗುರು ಶ್ರೀ ಶಂಕರಾಚಾರ್ಯ ಸ್ತೋತ್ರಮಾಲೆ

ರಾಗ: ಬೇಹಾಗ್ ಆದಿತಾಳ (ಭಜಗೋವಿಂದಂ ಎಂಬಂತೆ)

ಶ್ರೀಮಚ್ಛಂಕರ ಭಗವತ್ಪಾದರ
ಕೋಮಲ ಪದಗಳಿಗೆರಗುವೆನು
ಆ ಮಹಿಮರ ಪರಮಾನುಗ್ರಹದಿಂ
ತಾಮಸವಳಿಯಲು ಭಜಿಸುವೆನು ॥ಪಲ್ಲವಿ॥

ಧರೆಯೊಳು ದುರ್ಮತಗಳ ದೆಸೆಯಿಂದಲಿ
ನರಜನ್ಮವು ಕ್ಷೀಣಿಸುತಿರಲು
ಸುರತತಿ ಮೊರೆಯಿಡೆ ಶಿವಗುರುಸುತನಾ-
ಗಿರಲು ಬಂದ ಶಿವನಾಗಿರುವ ॥೧॥

ಹಳೆಯ ಪಾಠಗಳನೋಡಿದ ಮಾತ್ರದಿ
ತಿಳಿದುಕೊಳ್ಳುವಾ ರೀತಿಯಲಿ
ಎಳೆಯತನದೊಳಗೆ ಕಲೆಗಳನೆಲ್ಲವ
ತಿಳಿದು ಮಹಿಮೆಯನು ತೋರಿಸಿದ ॥೨॥

ಮುದುಕಿಯಾದ ತಾಯಾರ್ಯಾಂಬಿಕೆ ತಾಂ
ನದಿಗೆ ಹೋಗುವುದಕಾಗದಿರೆ
ನದಿಯನೆ ಮನೆಯ ಸಮೀಪಕೆ ತಿರುಗಿಸಿ
ಮುದದಿಂ ತಾಯಿಗೆ ವಂದಿಸಿದ ॥೩॥

ಜನಪನ ನಾಟಕಗಳ ತಾ ಲಾಲಿಸಿ
ಮನದೊಳು ಸಂತಸವನು ತಳೆದು
ಜನಪಾಲಕನಿಷ್ಟಾರ್ಥವನರಿಯು-
ತ್ತನುರೂಪದ ತನಯನನಿತ್ತ ||೪||

ನದಿಯಿಂ ಕೃಷ್ಣನ ಮೂರ್ತಿ ಚಲಿಸುತಿರ
ಲದ ಕಂಡಾದರರದಿಂದದನು
ಪದುಳವಾಗಲಾ ತಾಯ ಮನಸ್ಸಿಗೆ
ಮುದದಿಂ ಮನೆಯೊಳು ಸ್ಥಾಪಿಸಿದ ||೫||

ಕ್ಷಿತಿಯುದ್ಧಾರವ ಮಾಡಿ ಮತ್ತೆ ಸ-
ದ್ಗತಿಯನು ಸಂಪಾದಿಸುವುದಕೆ
ಯತಿಪದಮುತ್ತಮಮೆಂಬುದ ತೋರಲು
ಯತಿಧರ್ಮವನನುವರ್ತಿಸಿದ ॥೬॥

ನಾರಾಯಣ ಪರಮೇಷ್ಠಿ ವಸಿಷ್ಠರು
ಸೇರಿ ಬಂದ ಗುರುಕುಲದೊಳಗೆ
ರಾರಾಜಿಪ ಗೋವಿಂದ ಯತೀಂದ್ರರ
ಸೇರಿ ಶಿಷ್ಯರೆಂದೆನಿಸಿರ್ದ ॥೭॥

ಉಕ್ಕಿಬರಲು ನರ್ಮದೆ ಜನರೆಲ್ಲರು
ಸಿಕ್ಕಿರೆ ಕಷ್ಟದೊಳದ ನೋಡಿ
ಗಕ್ಕನೆ ತಮ್ಮ ಕಮಂಡಲದೊಳಗದ-
ನಿಕ್ಕಿ ಮಹಿಮೆಯನು ತೋರಿಸಿದ ॥೮॥

ಗುರುಪರಂಪರಾಪ್ರಾಪ್ತವಾಗಿ ಬಂ-
ದಿರುತ ಮೆರೆವ ಶಶಿಶೇಖರನ
ವರದ ರತ್ನಗರ್ಭಾಭಿದ ಗಣಪನ
ಪರಮ ಪ್ರೀತಿಯಲ್ಲರ್ಚಿಸಿದ ॥೯॥

ಶರಿರಕೆ ಹೊರತಹ ಚೈತನ್ಯವೆ ತ-
ನ್ನಿರವೆಂದರಿತಂತ್ಯಜನನ್ನು
ಗುರುವೆನ್ನುತ ತಾನರಿದಿಹ ನಿಷ್ಠಾ-
ಭರದಿಂ ಶಿವನನು ಮೆಚ್ಚಿಸಿದ ॥೧೦॥

ಉರು ಸಂಸಾರಾರ್ಣವವನು ದಾಟಿಪ
ಗುರುವಿಗೆ ನದಿಯೆಷ್ಟರದೆನುತ
ನೆರೆಬಂದ ಸನಂದರ ಪದ್ಮಪಾ-
ದರಗೈಯುತ ಕಡೆ ಹಾಯಿಸಿದ ॥೧೧॥

ವ್ಯಾಸರು ಸಾಕ್ಷಾದ್ದರ್ಶನವನು ಕೊ-
ಟ್ಟಾ ಸಮಯದಿ ಸಿದ್ಧಾಂತದೊಳು
ಭಾಸುರಮಾದೀ ಶಾಂಕರಭಾಷ್ಯಮೆ
ಲೇಸಾಗಿಹುದೆನೆ ರಚಿಸಿರುವ ॥೧೨॥

ಮಂಡನಮಿಶ್ರನ ಕರ್ಮಜಡತ್ವವ
ಖಂಡಿಸಿ ತತ್ವಜ್ಞಾನವನು
ತಂಡತಂಡದಾಧಾರಗಳಿಂ ಭೂ-
ಮಂಡಲವರಿಯಲು ಸಾಧಿಸಿದ ॥೧೩॥

ನೆರೆ ದೂರ್ವಾಸರ ನೋಡಿ ನಕ್ಕುದಕೆ
ನರಳಾಗಿರ್ದುದ ತಾ ಕಳೆದು
ವರಭಾರತಿಯಾಗಾ ಶೃಂಗೇರಿಯೊ-
ಳಿರುವಂತೊಲವಿಂದೊಪ್ಪಿಸಿದ ॥೧೪॥

ಕಾಪಾಲಿಕ ಜನರಳುಕುವಂತೆ ತಾಂ
ಕೋಪಾವಿಷ್ಟ ನೃಸಿಂಹನನು
ಆ ಪದ್ಮಪದಾಭಿದರೊಳ್ತೋರಿಸಿ
ಪಾಪಾಚರಣೆಯ ನಿಲ್ಲಿಸಿದ ॥೧೫॥

ನೀನಾರೆನಲಾ ಮೂಕನುಮಾಗಲೆ
ಕಾಣುವ ಹಸ್ತಾಮಲಕದವೊಲ್
ತಾನಾ ಬ್ರಹ್ಮವೆನಲು ದರ್ಶನದಿಂ-
ದೇನಹುದೆಂಬುದ ತೋರಿಸಿದ ॥೧೬॥

ಮುಖ ಸಂದರ್ಶನವಾಗುತ್ತಲೆ ಆ
ಸುಖದಿಂ ತೋಟಕ ವೃತ್ತದೊಳು
ಪ್ರಕಟವಾಗಿ ನುತಿಗೈದವರಿಗೆ ತೋ-
ಟಕರೆನುತಾಶ್ರಯವನು ಕೊಟ್ಟ ॥೧೭॥

ತಾಯಿಯು ತನ್ನನು ನೆನೆವಳೆಂದು ಬಂ-
ದಾ ಯತಿ ಸಂಸ್ಕಾರವ ತಾನು
ತಾಯಿಗೆ ಮಾಡಿ ವಿಶೇಷಾದರದೊಳು
ತಾಯ ಋಣವ ತಾ ತೀರಿಸಿದ ॥೧೮॥

ಕಾಮಾಕ್ಷೀ ದೇವಾಲಯದೊಳಗತಿ-
ನೇಮದಿಂದ ಶ್ರೀಚಕ್ರವನು
ಪ್ರೇಮದಿ ನೆಲೆಗೊಳಿಸುತ್ತಾ ಶಾಕ್ತರ
ತಾಮಸವಳಿಯಲು ಬೋಧಿಸಿದ ॥೧೯॥

ಜನರು ಸಂಕುಚಿತ ಬುದ್ಧಿಯುಪಾಸನೆ-
ಯನು ಬಿಡುವಂತುಪದೇಶಿಸುತ
ಅನುವಿಂ ಷಣ್ಮತಗಳ ಸಂಸ್ಥಾಪಿಸಿ
ಘನತರರವಹ ಕೀರ್ತಿಯ ಪಡೆದ ॥೨೦॥

ಭರತಖಂಡದಾದ್ಯಂತವ ಧರ್ಮೋ-
ದ್ಧರಣೆಗಾಗಿಯೇ ತಿರುತಿರುಗಿ
ಪರಮಾರ್ಥವನಾ ಜನಸಮುದಾಯಕೆ
ಪರಿಪರಿಯಿಂದಲಿ ಬೋಧಿಸಿದ ॥೨೧॥

ರಾಜರಿಗೆಲ್ಲರಿಗಾ ಸಿದ್ಧಾಂತದ
ನೈಜಾರ್ಥವ ಮನಗಾಣಿಸುತ
ರಾಜರಾಜ ಕೋಟೀರರತ್ನ ನೀ-
ರಾಜಿತ ಪದಯುಗನಾಗಿರುವ ॥೨೨॥

ವೇದವೆಂಬ ಪಾಲ್ಗಡಲನು ಕಡೆಯುತ
ಸಾಧಿಸಿದದ್ವೈತಾಮೃತವ
ಮೋದದಿ ಕೊಡುತಾ ಶಿಷ್ಯ ಸಮೂಹದ
ಖೇದವ ನಿರ್ಮೂಲವಗೈದ ॥೨೩॥

ಜೀವ ಬ್ರಹ್ಮರಿಗೈಕ್ಯವ ಸಾಧಿಸಿ
ಜೀವತ್ವದ ಬಿಡುಗಡೆಗಾಗಿ
ಸಾವಿರಾರು ಸಾಧನಗಳ ವಿವರಿಸಿ
ಜೀವರ ದುಃಖವ ತೊಲಗಿಸಿದ ॥೨೪॥

ಬ್ರಹ್ಮವೊಂದೆ ಸೃಷ್ಟಿಗೆ ಮೊದಲಿರ್ದುದು
ಬ್ರಹ್ಮವೊಂದೆ ಸತ್ತೆನಿಸುವುದು
ಬ್ರಹ್ಮವೊಂದೆ ಸರ್ವಾಧಾರವೆನುತ
ಬ್ರಹ್ಮಲಕ್ಷಣವ ವಿವರಿಸಿದ ॥೨೫॥

ಹಾವಿನ ರೂಪವು ಹಗ್ಗದಿ ತೋರುವ
ಭಾವದಂತೆಯೇ ಈ ಜಗವು
ಭಾವಿಸಲಾ ಬ್ರಹ್ಮದಿ ತೋರುವುದೆಂ-
ಬೀವಿವರವ ಮನಗಾಣಿಸಿದ ॥೨೩॥

ತೋರುತ್ತಿರುವೀ ನಾಮರೂಪಗಳು
ತೋರುತ್ತಿರಲಿಲ್ಲವು ಮೊದಲು
ತೋರದೆ ಪೋಪುವು ಮುಂದೆಯುಮದರಿನ
ಸಾರವಿದೆಂಬುದ ತೋರಿಸಿದ ॥೨೪॥

ಭ್ರಾಂತಿಗೆ ಕಾರಣ ಮಾಯೆಯೆನಿಪುದದ-
ನಂತರಂಗದಿಂದೋಡಿಸಲು
ಸಂತತವುಂ ಬ್ರಹ್ಮನ ಭಜಿಸೆನ್ನುತ
ಸಂತಸದಿಂ ಜನರಿಗೆ ಪೇಳ್ದಾ ॥೨೮॥

ಸುಲಭ ಶೈಲಿಯಿಂ ಪಾಮರ ಜನರುಂ
ಬಲಿದ ವಿಷಯದಿಂ ಪಂಡಿತರುಂ
ತಲೆದೂಗುತೆ ಮುಳುಗಲು ಗ್ರಂಥಂಗಳ
ಜಲಧಿಯ ಪೊಸತೆನೆ ನಿರ್ಮಿಸಿದ ॥೨೯॥

ಧರ್ಮಮಂಟಪಕೆ ನಾಲ್ಕು ಸ್ತಂಭಗಳು
ಪೆರ್ಮೆಯಂತೆ ನಾಲ್ದೆಸೆಯಲ್ಲಿ
ಧರ್ಮದ ಶಿಕ್ಷೆಯ ನಾಲ್ಕು ಮಠಂಗಳ
ನಿರ್ಮಿಸಿ ಧರ್ಮವ ರಕ್ಷಿಸಿದ ॥೩೦॥

ಲೋಕೋದ್ಧಾರಕ್ಕಾಗಿಯೆ ಈ ಭೂ
ಲೋಕದಲ್ಲಿ ತಾನವತರಿಸಿ
ಲೋಕೋತ್ತರ ಮಹಿಮೆಗಳನು ತೋರಿಸಿ
ಲೋಕವನುದ್ಧಾರವಗೈದ ॥೩೧॥

ಮುಗಿಸುತೆಲ್ಲ ಕರ್ತವ್ಯವನಿಂತೀ
ಜಗದೊಳು ಧರ್ಮಸ್ಥಾಪನೆಯ
ನೆಗಳಿ ತಾನು ಬದರಿಯ ಗುಹೆಯನು ಸೋ-
ಜಿಗವೆನೆ ಪೊಕ್ಕಲ್ಲಿಯೆ ನಿಂತ ॥೩೨॥

ಫಲಶ್ರುತಿ

ಗತಿಯಿಲ್ಲದೆ ನೆಲ್ಲಿಯ ಕಾಯೊಂದನು
ಹಿತದಿ ಭಿಕ್ಷೆವಿಡೆ ಕರುಣದೊಳಾ-
ಸತಿಗೆ ಸುವರ್ಣದ ನೆಲ್ಲಿಯಿತ್ತು ಚಿತ್-
ಸ್ಥಿತಿಯೊಳಗಾಕೆಯ ನಿಲ್ಲಿಸಿದ ॥೩೩॥

ಕರ್ನಾಟಕ ಕವಿರತ್ನ

ಹೊಸಕೆರೆ ಚಿದಂಬರಯ್ಯನವರು

(ಜನನ: ೨೮.೧೨.೧೮೭೦ ಮರಣ: ೧೭.೦೪.೧೯೩೮)

ತುಮಕೂರು ಜಿಲ್ಲೆಯ ಗುಬ್ಬಿ ತಾಲ್ಲೂಕಿನ ಹೊಸಕೆರೆಯಲ್ಲಿ ಜನಿಸಿದ ಚಿದಂಬರಯ್ಯನವರು ಅರವತ್ತೇಳು ವರ್ಷಗಳು ಜೀವಿಸಿದ್ದರು. ಸುಮಾರು ಐವತ್ತು ವರುಷಗಳ ಕಾಲದಲ್ಲಿ ಅವರು ಸಾವಿರಾರು ಪ್ರವಚನಗಳನ್ನು ನೀಡಿದ್ದಾರೆ. ಎಪ್ಪತ್ತಕ್ಕೂ ಹೆಚ್ಚಿನ ಗ್ರಂಥಗಳನ್ನು ರಚಿಸಿದ್ದಾರೆ. ಜೀವನಚರಿತ್ರೆ (೬), ಶಿಕ್ಷಣ (೭), ಕಾದಂಬರಿ (೪), ಕಥೆ (೧) ಧಾರ್ಮಿಕ ಗದ್ಯ (೩೦) ನಾಟಕ (೭), ಕೀರ್ತನ ಸಾಹಿತ್ಯ (೭), ಧಾರ್ಮಿಕ ಪದ್ಯ ಸಾಹಿತ್ಯ (೧೦), ಗದ್ಯಗ್ರಂಥಗಳು(೫೦), ಪದ್ಯ ಗ್ರಂಥಗಳು (೨೦)– ಬರೆದ ಇವರು ಹೊಸಗನ್ನಡ ಗದ್ಯಶಿಲ್ಪಿಗಳಲ್ಲಿ ಒಬ್ಬರು.

ಶಂಕರಂ ಶಂಕರಾಚಾರ್ಯಂ। ಕೇಶವಂ ಬಾದರಾಯಣಂ।
ಸೂತ್ರ ಭಾಷ್ಯ ಕೃತಂವಂದೇ। ಭಗವಂತಂ ಪುನಃಪುನಃ॥
ಶೃತಿ ಸ್ಮೃತಿ ಪುರಾಣಾನಾಂ। ಆಲಯಂ ಕರುಣಾಲಯಂ।
ನಮಾಮಿ ಭಗವತ್ಪಾದಂ। ಶಂಕರಂ ಲೋಕಶಂಕರಂ॥